ಶ್ರೀ ಧರ್ಮಸಿಂಗ್ : ನೀವು ಕೂಡ ಸೀನಿಯರ್ ಲೆಜಿಸ್ಲೇಟರ್ ಇದ್ದೀರಿ, ಪ್ರಶ್ನೆ ರೂಪದಲ್ಲಿ, ಇಲ್ಲವೇ ಗಮನ ಸೆಳೆಯುವ ಸೂಚನೆ ರೂಪದಲ್ಲಿ ಕೇಳಿದರೆ ಉತ್ತರ ಕೊಡಬಹುದು. ಶೂನ್ಯ ವೇಳೆಯಲ್ಲಿ ಬಂದ ಮೇಲೆ ಅದು ಎಲ್ಲಾ ಕಡೆಯಿಂದ ಸಮರ್ಪಕವಾದ ಉತ್ತರ ಆಗುವುದಿಲ್ಲ. ಆದರೂ ಕೂಡ ನಾನು ಹೇಳುತ್ತಿದ್ದೇನೆ. ಮಾನ್ಯ ರಾಜ್ಯಪಾಲರ ಭಾಷಣದ ಮೇಲಿನ ಚರ್ಚೆಗೆ ಉತ್ತರಿಸುವಾದ ಇದರ ಬಗ್ಗೆ ಕೂಡ ಸವಿಸ್ತಾರವಾದ ಉತ್ತರ ಕೊಡುತ್ತೇನೆ.

ಅಧ್ಯಕ್ಷರು : ರಮೇಶ್ ಕುಮಾರ್‌ರವರೇ, ನೀವು ಗಮನ ಸೆಳೆಯುವ ಸೂಚನೆ ಹಾಕಿದ್ದೀರಿ....

(ಆ) ಶೂನ್ಯವೇಳೆಯಲ್ಲಿ ತಮ್ಮ ಕ್ಷೇತ್ರದ ವಿಷಯ ಪ್ರಸ್ತಾಪಿಸಲು ಅವಕಾಶ ಸಿಗಲಿಲ್ಲವೆಂದು ಮಾನ್ಯ ಸದಸ್ಯರಾದ ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡರಿಂದ ಧರಣಿ

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ (ಕಲಘಟಗಿ) : ಮಾನ್ಯ ಅಧ್ಯಕ್ಷರೆ, ನಾನು ಶೂನ್ಯ ವೇಳೆಯಲ್ಲಿ ನನಗೆ ಮಾತನಾಡುವುದಕ್ಕೆ ಅವಕಾಶ ಕೊಡಿ ಎಂದು ಚೀಟಿ ಬರೆದು ಕಳುಹಿಸಿದ್ದೇನೆ.

ಅಧ್ಯಕ್ಷರು : ಆಯಿತು, ಸಮಯ ಕೊಡೋಣ. ಈಗ ಕುಳಿತುಕೊಳ್ಳಿ. ಮಾನ್ಯ ಜಗದೀಶ್ ಶೆಟ್ಟರ್‌ರವರೇ, ಪ್ರಶ್ನೋತ್ತರಕ್ಕೆ ಎರಡರಿಂದ ಎರಡೂವರೆ ಗಂಟೆ ಸಮಯ ಆಗಿದೆ. ದಯಮಾಡಿ ಕೇಳಿ, ಶೂನ್ಯವೇಳೆಯಲ್ಲಿ ಒಂದು ಅಥವಾ ಎರಡು ವಿಷಯಗಳನ್ನು ಪ್ರಸ್ತಾಪಿಸುವುದಕ್ಕೆ ಅವಕಾಶ ಕೊಡಬಹುದು. ನಿಮಗೆ ಇನ್ನೊಂದು ದಿವಸ ಅವಕಾಸ ಕೊಡೋಣ. ದಯಮಾಡಿ ಕುಳಿತುಕೊಳ್ಳಿ.

ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ : ನನಗೆ ಅವಕಾಶ ಕೊಡಸಿದ್ದರೆ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಶಾಸಕರಾದ ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡರವರು ಬಾವಿಯಲ್ಲಿ ಬಂದು ಧರಣಿ ಪ್ರಾರಂಭಿಸಿದರು)

ಅಧ್ಯಕ್ಷರು : ನೀವು ಏನು ಬೇಕಾದರೂ ಮಾಡಿಕೊಳ್ಳಬಹುದು. ನಾನು ಸಭಾ ನಿಯಮದ ಪ್ರಕಾರ ಕೆಲಸ ಮಾಡಬೇಕಾಗುತ್ತದೆ. ಮಾನ್ಯ ಯಡಿಯೂರಪ್ಪನವರೇ, ನಿಮ್ಮ ಸದಸ್ಯರು ಪ್ರತಿಯೊಂದಕ್ಕೂ ಥ್ರೆಟ್ ಮಾಡುತ್ತಾರೆ. ಪ್ರತಿಯೊಂದಕ್ಕೂ ನಿಂತುಕೊಳ್ಳುತ್ತಾರೆ. ಈ ತರಹ ಆದರೆ ನಾನು ಸಭೆ ನಡೆಸುವುದಕ್ಕಾಗುವುದಿಲ್ಲ. ಇದನ್ನು ಸಹಿಸಿಕೊಳ್ಳುವುದಕ್ಕೆ ನನಗೆ ಸಾಧ್ಯವಾಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಅವರ ಕ್ಷೇತ್ರದಲ್ಲಿ ಹಗಲು ರಾತ್ರಿ ಧರಣಿ ನಡೆಯುತ್ತಿದೆ. ಸತ್ಯಾಗ್ರಹ ನಡೆಯುತ್ತಿದೆ, ಹೋರಾಟ ನಡೆಯುತ್ತಿದೆ. ಸಂಬಂಧಪಟ್ಟ ಡಿಸಿ ಯವರು ಕೂಡ ಹೋಗಿ ಅಲ್ಲಿ ಮಾತನಾಡಿಲ್ಲ. ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಮೋರೆಯವರಿಗೆ ಹೇಳುತ್ತಿದ್ದೇನೆ, ಕಲಘಟಗಿಯಲ್ಲಿ ಹಗಲು ರಾತ್ರಿ ಸತ್ಯಾಗ್ರಹ ನಡೆಯುತ್ತಿದೆ. ಪ್ರಮುಖ ಬೆಳೆ ವಿಮೆ ಇರಬಹುದು,

ಮತ್ತು ಅಭಿವೃದ್ಧಿ ಬಗ್ಗೆ ಇರಬಹುದು, ದಯಮಾಡಿ ತಾವಾದರೂ ಹೋಗಿ ಅಲ್ಲಿ ಧರಣಿ ಕುಳಿತಿರುವವರ ಜೊತೆ ಮಾತನಾಡಬೇಕೆಂದು ಹೇಳುತ್ತಿದ್ದೇನೆ.

ಅಧ್ಯಕ್ಷರು : ರಮೇಶ್ ಕುಮಾರ್‌ರವರೇ, ತಾವು ಕೇಳಿ. ಜಗದೀಶ್ ಶೆಟ್ಟರ್‌ರವರೇ, ದಯಮಾಡಿ ಕೂತುಕೊಳ್ಳಿ ಇನ್ನೂ ಅನೇಕ ಸಮಸ್ಯೆಗಳು ಇವೆ. ಇವತ್ತಲ್ಲ ನಾಳೆ ನಾನು ಅವಕಾಶ ಕೊಡುತ್ತೇನೆ. ದಯಮಾಡಿ ಸಹಕರಿಸಿ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ನೀವು ಎಲ್ಲಾ ರೀತಿ ಸಹಕಾರ ಕೊಡುತ್ತಿದ್ದೀರ. ನಮ್ಮ ಎಲ್ಲಾ ಸಮಸ್ಯೆಗಳನ್ನು ಸದನದಲ್ಲಿ ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತಿದ್ದೀರಿ. ಅದಕ್ಕೆ ನಿಮಗೆ ಅಭಿನಂದನೆಗಳು. ಪ್ರಶ್ನೆ ಇಷ್ಟೆ. ಮಾನ್ಯ ಮುಖ್ಯಮಂತ್ರಿಗಳಿದ್ದಾರೆ, ನಾವು ನಿಮಗೆ ಒತ್ತಾಯ ಮಾಡುವುದಿಲ್ಲ.

ಅಧ್ಯಕ್ಷರು : ಆಯಿತು, ಇವತ್ತಲ್ಲ ನಾಳೆ ಅವಕಾಶ ಕೊಡೋಣ. ಆದರೆ ಇವತ್ತೇ ಅವಕಾಶ ಕೊಡಬೇಕೆಂದರೆ ಇದನ್ನೆಲ್ಲಾ ನನಗೆ ಸಹಿಸಿಕೊಳ್ಳುವುದಕ್ಕಾಗುವುದಿಲ್ಲ.

ಶ್ರೀ ಬಿ.ಎಸ್. ಯಡಿಯೂರಪ್ಪ : ನಾನು ಒತ್ತಾಯ ಮಾಡುವುದಿಲ್ಲ. ಸನ್ಮಾನ್ಯ ಮುಖ್ಯ ಮಂತ್ರಿಗಳು ಇದ್ದಾರೆ. ರಾಜ್ಯದ ಜನತೆ ಜ್ವಲಂತ ಸಮಸ್ಯೆಗಳನ್ನು ತೆಗೆದುಕೊಂಡು ಸತ್ಯಾಗ್ರಹ ಚಳುವಳಿ ನಡೆಸಿದರೆ ಆ ಬಗ್ಗೆ ಸರ್ಕಾರ ಗಮನ ಹರಿಸಿ ಕ್ರಮ ಕೈಗೊಳ್ಳುವುದು ಸಾಮಾನ್ಯವಾಗಿ ನಡೆದುಕೊಂಡು ಬಂದಿರುವ ಪದ್ಧತಿ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಯಾರೂ ಶಾಶ್ವತವಾಗಿ ಇರುವುದಿಲ್ಲ. ಅದಲು ಬದಲು ಆಗುತ್ತಾರೆ. ನಿಜವಾದ ಜ್ವಲಂತ ಸಮಸ್ಯೆಗಳ ಸಲುವಾಗಿ ಹತ್ತಾರು ದಿವಸಗಳಿಂದ ಧರಣಿ ಕುಳಿತಾಗ ಡೆಪ್ಯುಟಿ ಕಮಿಷನರ್ ಆಗಲಿ ಜಿಲ್ಲಾ ಉಸ್ತುವಾರಿ ಸಚಿವರಾಗಲಿ ಯಾರೂ ಬಂದು ನಿಮ್ಮ ಕಷ್ಟ ಏನು ಎಂದು ವಿಚಾರಿಸಿ ಅದು ಸರಿ ಇದ್ದರೆ ಅದಕ್ಕೆ ಸ್ಪಂದಿಸುತ್ತೇವೆಂದು ಭರವಸೆ ಕೊಡದೆ ಇದ್ದರೆ ನೀವು ಬೇಕಾದರೆ ಧರಣಿ ಕುಳಿತುಕೊಳ್ಳಿ. ನೀವು ಸಾಯಿರಿ ನಿಮಗೆ ಏನೂ ಸಂಬಂಧ ಇಲ್ಲವೆಂದು ಹೇಳುವುದಾದರೆ ಹೇಗೆ? ಕಲಘಟಗಿಯಲ್ಲಿ ಕಳೆದ 15 ದಿವಸಗಳಿಂದ ಸತ್ಯಾಗ್ರಹ ಮಾಡುತ್ತಿದ್ದಾರೆ. ನೀವೇ ಎನ್‌ಕ್ವೈರಿ ಮಾಡುತ್ತೇವೆಂದು ಹೇಳಿದ್ದೀರಿ. ಬೆಳೆ ವಿಮೆ ಬಗ್ಗೆ ಈ ರೈತರ ಜ್ವಲಂತ ಸಮಸ್ಯೆ ಇದೆ. ಇದರ ಬಗ್ಗೆ ಆ ಕ್ಷೇತ್ರದ ಸಮಸ್ಯೆ ತೆಗೆದುಕೊಂಡು ಅವರು ಧರಣಿ ಮಾಡುತ್ತಿದ್ದಾರೆ. ನಿಮ್ಮ ಅಧಿಕಾರಿಗಳು ಹೋಗಿ ಆ ಸಮಸ್ಯೆ ಬಗೆಹರಿಸುವ ಭರವಸೆ ಕೊಟ್ಟರೆ ಉತ್ತಮ. ನೀವು ಒಳಗಡೆ ಬನ್ನಿ.

(ಮಾನ್ಯ ಶಾಸಕರಾದ ಶ್ರೀ ಚಿಕ್ಕನಗೌಡ ಸಿದ್ದನಗೌಡ ಈಶ್ವರಗೌಡ ರವರು ಧರಣಿ ಮುಕ್ತಾಯ ಮಾಡಿ ತಮ್ಮ ಸ್ಥಾನಕ್ಕೆ ವಾಪಸ್ಸಾದರೂ)

ಅದಕೋಸ್ಕರ ದಯವಿಟ್ಟು ತಾವು ಯಾರಾದರೂ ಹೋಗಿ ಆ ಸಮಸ್ಯೆ ಬಗೆಹರಿಸಿ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಶಾಸಕರು ಏನು ಮಾಡಬೇಕು?

ಶ್ರೀ ಎಸ್.ಆರ್. ಮೋರೆ (ಪೌರಾಡಳಿತ ಸಚಿವರು) : ಮಾನ್ಯ ಸಿದ್ದನಗೌಡರಿಗೆ ಮುಂಜಾನೆ ಕರೆದು ಮಾತನಾಡಿದ್ದೇನೆ. ನಾಳೆ ಧಾರವಾಡಕ್ಕೆ ಹೋದಾಗ ಪ್ರತ್ಯೇಕವಾದ

ಸಭೆ ಏರ್ಪಾಡು ಮಾಡಿ ಅವರ ಸಮಸ್ಯೆಗಳನ್ನು ನಾನು ಬಗೆಹರಿಸುತ್ತೇನೆ. ಅವರು ಎರಡು ಸಮಸ್ಯೆಗಳನ್ನು ಹೇಳಿದ್ದಾರೆ. ಒಂದು ಕೆರೆಯಲ್ಲಿ ಹೂಳು ತೆಗೆಸುವುದು ಮತ್ತು ಇನ್ನೊಂದು ಕಾಲೇಜ್ ಕೊಡುವುದು. ಈಗಾಲೇ ಮಾನ್ಯ ಮುಖ್ಯ ಮಂತ್ರಿಗಳಿಗೆ ಹೇಳಿದ್ದೇನೆ. ಇದು ಏನು ಸಮಸ್ಯೆ ಎಂದು ಕೇಳಿಕೊಂಡು ನನಗೆ ಹೇಳಿ ಎಂದು ಹೇಳಿದ್ದಾರೆ. ಇದನ್ನು ಮಾಡುತ್ತೇನೆ.

ಅಧ್ಯಕ್ಷರು : ಯಡಿಯೂರಪ್ಪನವರೇ, ದಯಮಾಡಿ ಹೇಳಿ, ಇದು ಶೂನ್ಯವೇಳೆ....

ಶ್ರೀ ಕೆ. ಶ್ರೀನಿವಾಸಗೌಡ : ನಾಳೆ ಎಲ್ಲಾ ಸದಸ್ಯರು ಈ ರೀತಿ ಧರಣಿ ಕುಳಿತುಕೊಂಡರೆ ಸರ್ಕಾರ ಕೆಲಸ ಮಾಡುವುದು ಹೇಗೆ? ಪ್ರತಿಯೊಂದಕ್ಕೂ ಅಧ್ಯಕ್ಷರು ಇದಕ್ಕೆ ಅನುಮತಿ ಕೊಡಬಾರದು.

ಅಧ್ಯಕ್ಷರು : ನಾನು ಪ್ರತಿಪಕ್ಷದ ನಾಯಕರಲ್ಲಿ ವಿನಂತಿಸುವುದು, ಬಹಳ ಜನ ಶೂನ್ಯ ವೇಳೆಯಲ್ಲಿ ಅವಕಾಶ ಕೊಡಬೇಕೆಂದು ನನ್ನ ಛೇಂಬರ್‌ನಲ್ಲಿ ಬಂದು ಕೇಳುತ್ತಾರೆ. ಎಲ್ಲರಿಗೂ ಅವಕಾಶ ಕೊಡುವುದಕ್ಕಾಗುವುದಿಲ್ಲ. ಬಹಳ ಪ್ರಮುಖವಾದ ವಿಷಯ ಇದ್ದರೆ ದಿವಸಕ್ಕೆ ಇಬ್ಬರಿಗೆ ಅವಕಾಶ ಕೊಡಬಹುದು. ಆ ಮೇಲೆ ಗಮನ ಸೆಳೆಯುವ ಸೂಚನೆಗೆ ಒಂದೆರಡಕ್ಕೆ ಅವಕಾಶ ಕೊಡಬಹುದು. ಇಲ್ಲದಿದ್ದರೆ ಏನಾಗುತ್ತದೆ ಎಂದರೆ, ಯಾವುದೇ ಬಿಸ್‌ನೆಸ್ ನಡೆಯುವುದಿಲ್ಲ. ಆ ಕಾರಣದಿಂದ ಇವತ್ತು ಶೂನ್ಯವೇಳೆಯಲ್ಲಿ ವಿಷಯಗಳು ಜಾಸ್ತಿಯಾಗಿರುವುದರಿಂದ ಇವತ್ತು ಮತ್ತೆ ಅವಕಾಶ ಕೊಡುವುದಕ್ಕಾಗುವುದಿಲ್ಲ. ಇನ್ನು ಮುಂದೆ ಎರಡು ಗಮನ ಸೆಳೆಯುವ ಸೂಚನೆ, ಶೂನ್ಯವೇಳೆಯಲ್ಲಿ ಎರಡು ವಿಷಯಗಳನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಮಾಡಿಕೊಡುತ್ತೇನೆ. ಎಲ್ಲರೂ ಸಹಕಾರ ನೀಡಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

(ಇ) ಕನಕಪುರ ಲೋಕಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಶಾಸಕು ತಮ್ಮ ಅನುದಾನವನ್ನು ಸಮರ್ಪಕವಾಗಿ ಬಳಸದಿದ್ದರೆ ಅವರ ಮೇಲೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಸಂಸತ್ ಸದಸ್ಯರು ಪತ್ರಿಕಾ ಹೇಳಿಕೆ ನೀಡಿರುವ ಬಗ್ಗೆ.

ಶ್ರೀ ಕೆ. ಅನ್ನದಾನಿ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ದಯಮಾಡಿ ಎರಡು ನಿಮಿಷ ಅವಕಾಶ ಮಾಡಿಕೊಡಿ. ನಾನು ಹೆಚ್ಚಿಗೆ ಮಾತನಾಡುವುದಿಲ್ಲ.

ಅಧ್ಯಕ್ಷರು : ಮಾನ್ಯ ಅನ್ನದಾನಿಯವರಲ್ಲಿ ವಿನಂತಿ ಮಾಡುವುದು ಇಷ್ಟೆ. ಈಗ ಹೇಳಿದ್ದೇನೆ, ಮತ್ತೆ ಮತ್ತೆ ನೀವು ಅವಕಾಶ ಕೇಳುತ್ತಿದ್ದೀರಿ. ನಿಮ್ಮ ಕ್ಷೇತ್ರಕ್ಕೆ ಅದು ಪ್ರಮುಖವಾಗಿರಬಹುದು, ಆದರೆ ಸದನ ನಡೆಯಬೇಕು. ನಿಯಮಾಳಿ ಪ್ರಕಾರ ನಡೆಯಬೇಕು. ಅದಕ್ಕೆ ದಯಮಾಡಿ ತಾವು ಸಹಕರಿಸಬೇಕು.